# ಜುಂಬಾ ಪ್ರೀತಿಯ ಡ್ಯಾನಿ



ಡ್ಯಾನಿ ಕೋಬ್ ಪೆನಿಸಿ

ಚಿತ್ರ: ಕಿಶೋರ್‌ಕುಮಾರ್ ಬೋಳಾರ್

ನೃತ್ಯದಲ್ಲಿ ಆಸಕ್ತಿ, ಮಾಡೆಲಿಂಗ್ ಪ್ರೀತಿ, ವಿಮಾನಯಾನದ ಸುಖ, ಪ್ರವಾಸಿ ತಾಣಗಳನ್ನು ನೋಡುವ ತವಕ, ಹೊಸ ಹೊಸ ಅಡುಗೆ ರುಚಿ ನೋಡುವ ಉತ್ಸಾಹ.. ಹೀಗೆ ಹತ್ತು ಹಲವು ವಿಶೇಷಣಗಳನ್ನು ಮಡಿಲಲ್ಲಿ ಇಟ್ಟುಕೊಂಡು ವಿಶ್ವ ಪರ್ಯಟನೆ ಮುಗಿಸಿ ಬೆಂಗಳೂರಿನಲ್ಲಿ ಬಂದು ನೆಲೆ ನಿಂತವರು ಅಮೆರಿಕದ ನ್ಯೂಯಾರ್ಕ್‌ನ ಬೆಡಗಿ ಡ್ಯಾನಿ ಕೋಬ್ ಪೆನಿಸಿ.

ಡ್ಯಾನಿಗೆ ಚಿಕ್ಕಂದಿನಿಂದಲೂ ನೃತ್ಯದಲ್ಲಿ ಆಸಕ್ತಿ. ಹೀಗಾಗಿ ಜುಂಬಾ ನೃತ್ಯ ಕಲಿಯಲೆಂದೇ ಈಕೆ ದೆಹಲಿಗೆ ಬಂದವರು. 2009ರಲ್ಲಿ ದೆಹಲಿಗೆ ಬಂದ ಈ ಅಮೆರಿಕದ ಬೆಡಗಿ ನಂತರ ಬೆಂಗಳೂರಿಗೆ ಬಂದು ಇಲ್ಲೂ ಜುಂಬಾ ನೃತ್ಯ ಕಲಿಸಲಾರಂಭಿಸಿದರು. ಕರ್ನಾಟಕದಲ್ಲಿ ಸಿಗುವ ಅವಕಾಶ ಮತ್ತು ಸುಂದರ ವಾತಾವರಣ ಕಂಡ ಡ್ಯಾನಿ ಅದಾಗಿ ಮತ್ತೆ ದೆಹಲಿಗೆ ಮರಳುವ ಯೋಜನೆ ಕೈಬಿಟ್ಟರು. ಇಲ್ಲೇ ನೆಲೆಯೂರಿದರು.

ಆರು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದ ಈಕೆ ಹುಟ್ಟಿದ್ದು ನ್ಯೂಯಾರ್ಕ್‌ನಲ್ಲಿ. ಅಮೆರಿಕದಲ್ಲಿ ಇವರ ಕುಟುಂಬ ನೆಲೆಸಿದ್ದರೂ ಓದುವ ಸಲುವಾಗಿ ಡ್ಯಾನಿ ಐದು ವರ್ಷಗಳ ಕಾಲ ಆಫ್ರಿಕಾದಲ್ಲೂ ಇದ್ದರು. ಇಟಲಿಯಲ್ಲಿ 15 ವರ್ಷಗಳ ಕಾಲ ಮಾಡೆಲಿಂಗ್ ಮಾಡಿದ್ದ ಈಕೆ ಹಾರ್ಸ್ ಟ್ರೇನರ್ (ಶೋ ಜಂಪರ್) ಆಗಿಯೂ ತರಬೇತಿ ನೀಡುತ್ತಿದ್ದವರು. ಅಮೆರಿಕದ ಯುನೈಟೆಡ್ ಏರ್‌ಲೈನ್ಸ್ ವಿಮಾನದಲ್ಲಿ ಏರ್‌ಹೋಸ್ಟಸ್ ಆಗಿಯೂ ಕೆಲಸ ಮಾಡಿದ ಅನುಭವ ಈಕೆಗಿದೆ. ಇಲ್ಲೂ ಹಲವು ವರ್ಷಗಳ ಕಾಲ ದುಡಿದ ಡ್ಯಾನಿ ಬಳಿಕ ಬೆಂಗಳೂರಿಗೆ ಬರುವ ನಿರ್ಧಾರ ಮಾಡಿದರು.

'ಇಂಡಿಯಾ ಈಸ್ ದ ಪ್ಲೇಸ್ ಫಾರ್ ರೆಸ್ಟ್ ಅಂಡ್ ರಿಲ್ಯಾಕ್ಸ್' ಎನ್ನುವ ಡ್ಯಾನಿ, ಆಗಾಗ ಇಟಲಿ, ಅಮೆರಿಕ, ಆಫ್ರಿಕಾಗಳಿಗೆ ಪ್ರವಾಸ ಹೋಗುತ್ತಲೇ ಇರುತ್ತಾರಂತೆ. ಅಡುಗೆ ಮಾಡುವುದು ಈಕೆಯ ಪ್ರಿಯವಾದ ಹವ್ಯಾಸವಂತೆ. ಅಮೆರಿಕದ ತಿಂಡಿ ತಿನಿಸುಗಳನ್ನೇ ಹೆಚ್ಚಾಗಿ ಮಾಡುವ ಡ್ಯಾನಿ, ಅಡುಗೆ ಬೇಕಾದ ಸಾಮಗ್ರಿಗಳು ಇಲ್ಲಿ ಸಿಗದೇ ಇರುವಂಥವನ್ನು ಅಮೆರಿಕದಿಂದಲೇ ಕೊಂಡು ತರುತ್ತಾರಂತೆ.

ಭಾರತದಲ್ಲಿ ಚಂಡೀಗಢ, ಅಮೃತಸರ, ಆಗ್ರಾ, ಜೈಪುರ, ಮುಂಬಯಿ, ಚೆನ್ನೈ ಮುಂತಾದ ಕಡೆ ಪ್ರವಾಸ ಮಾಡಿ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಬಂದಿದ್ದಾರೆ. ಇಷ್ಟು ಜಾಗಗಳನ್ನು ನೋಡಿದರೂ ಡ್ಯಾನಿಗೆ ಬೆಂಗಳೂರೇ ಅತ್ಯಂತ ಪ್ರಿಯವಾದ ತಾಣವಂತೆ.

'ಬೆಂಗಳೂರಿನಲ್ಲಿ ಪ್ರಪಂಚದ ಎಲ್ಲ ದೇಶಗಳ, ಭಾಷೆಯ ಜನರನ್ನು ಕಾಣ ಬಹುದು. ಹೆಚ್ಚಾಗಿ ಆಫ್ರಿಕಾದವರೇ ತುಂಬಿರುವ ಬೆಂಗಳೂರು ಎಲ್ಲ ದೇಶದ ಉದ್ಯೋಗಸ್ಥರಿಗೆ ಆಸರೆ, ಆಶ್ರಯ ನೀಡುವ ನಗರ ಎಂಬುದು ನನ್ನ ಭಾವನೆ' ಎನ್ನುತ್ತಾರೆ ಡ್ಯಾನಿ.

'ಇಲ್ಲಿನ ಜನರ ಬದುಕು ವರ್ಣಮಯ. ಭಾರತೀಯ ಜನರ ಮುಖ್ಯವಾಗಿ ಮಹಿಳೆಯರ ಉಡುಗೆ ಸಾಂಪ್ರದಾಯಿಕವಾಗಿದ್ದು ಆಕರ್ಷಕವೂ ಆಗಿದೆ ಎನ್ನುವ ಡ್ಯಾನಿ, ಇಲ್ಲಿನ ಆಚರಣೆಗಳು ಕೂಡ ಬಹಳ ಹಿಡಿಸಿವೆ. ಹಬ್ಬ ಹರಿದಿನಗಳನ್ನು ಶ್ರದ್ಧಾಪೂರ್ವಕವಾಗಿ ಆಚರಿಸುವುದನ್ನು ನೋಡಿದರೆ ಬಹಳ ಖುಷಿಯಾಗುತ್ತದೆ. ಇಂಥ ವೈವಿಧ್ಯತೆ ಬಹುಶಃ ಬೇರೆ ಯಾವ ದೇಶಗಳಲ್ಲೂ ಕಾಣಸಿಗದು' ಎಂದು ಅಭಿಪ್ರಾಯಪಡುತ್ತಾರೆ.

ನಾಟಕ ಮತ್ತು ಭರತನಾಟ್ಯ ಕಲೆ ಡ್ಯಾನಿಗೆ ಬಹಳ ಇಷ್ಟವಂತೆ. ದಕ್ಷಿಣ ಭಾರತದಲ್ಲಿ ನೃತ್ಯಕ್ಕೆ ವಿಪುಲ ಅವಕಾಶ ಇರುವ ಕಾರಣ ಜತೆಗೆ ಜುಂಬಾ ನೃತ್ಯವನ್ನೂ ಕಲಿತಿರುವ ಡ್ಯಾನಿ ಈ ಎಲ್ಲ ಲಲಿತ ಕಲೆಗಳಲ್ಲಿ ತೊಡಗಿಸಿಕೊಳ್ಳುವ ಆಸಕ್ತಿ ತೋರಿದ್ದಾರೆ. ಇಲ್ಲಿಯ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ನೃತ್ಯ ಕಾರ್ಯಕ್ರಮಗಳನ್ನೂ ರೂಪಿಸುತ್ತಾರೆ ಡ್ಯಾನಿ.

ನಾನ್ ಮತ್ತು ತಂದೂರಿ ರೊಟ್ಟಿ ಜತೆಗೆ ಸೈಡ್ ಡಿಶ್‌ಗಳೆಲ್ಲ ಬಹಳ ಇಷ್ಟಪಟ್ಟು ತಿನ್ನುತ್ತಾರಂತೆ. ಹೋಟೆಲ್‌ಗಳಲ್ಲಿ ಬಫೆಟ್ ಊಟ ಅಂದರೆ ಇವರಿಗೆ ಪಂಚ ಪ್ರಾಣ. ಬಿಡುವಿನ ಸಮಯದಲ್ಲಿ ಹೋಟೆಲ್, ಮಾಲ್ ಸುತ್ತುವುದು, ತಿನ್ನುವುದು ಹವ್ಯಾಸವಂತೆ.

ಹಿಂದಿ ಭಾಷೆ ಕಲಿಯಲು ಬಹಳ ಆಸಕ್ತಿ ತೋರುವ ಡ್ಯಾನಿ, ಇಂಗ್ಲಿಷ್ ಸಾರ್ವತ್ರಿಕ ಭಾಷೆಯಾದರೂ ಮಾತನಾಡಲು, ಸಂವಹನಕ್ಕೆ ಹಿಂದಿಯನ್ನೇ ಅವಲಂಬಿಸಬೇಕು ಎಂಬ ಮಹತ್ವಾಕಾಂಕ್ಷೆ ಉಳ್ಳವರು. ಬಹು ಕ್ಷೇತ್ರಗಳಲ್ಲಿ ಆಸಕ್ತಳಾದ ಡ್ಯಾನಿ ಬದುಕೇ ಕಲರ್‌ಫುಲ್. ಪುಟಿದೇಳುವ ಜೀವನೋತ್ಸಾಹ, ಮತ್ತಷ್ಟು ಕಲಿಯಬೇಕೆನ್ನುವ ಹುಮ್ಮಸ್ಸು ನಿಜಕ್ಕೂ ಯುವಪೀಳಿಗೆಗೆ ಮಾದರಿ.

★ **ಅವನೀಶ್**